ದಿನಾಂಕಃ 04-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಡಿ.ಸಿ.ಪಿ. ವಕೀಲರಿಂದಃ –

15. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿ "ಹೊಲೆಯ ಸೂಳೆಮಗನೇ, ಮಾದಿಗ ಸೂಳೆಮಗನೇ ಎಂದು ಬೈದನು" ಎಂದು ಹೇಳಿದ್ದಿರಿ ಆ ಸಮಯದಲ್ಲಿ ನಿಮ್ಮನ್ನು ಹೊರತುಪಡಿಸಿ ಬೇರೆ ಯಾರಾದರೂ ಇದ್ದರೆ ಎಂದರೆ ಸಾಕ್ಷಿ ಯಾರು ಇರಲಿಲ್ಲ ಎನ್ನುತ್ತಾರೆ. ಟ್ರ್ಯಾಕ್ಟರಿನಲ್ಲಿ ಇಟ್ಟಿಗೆಯನ್ನು ತುಂಬಿಸುವ ಸಮಯದಲ್ಲಿ ನೀವು ಜಾರಿ ಬಿದ್ದು ಪೆಟ್ಟು ಮಾಡಿಕೊಂಡಿದ್ದಿರಿ ಎಂದರೆ ಸರಿಯಲ್ಲ. ನಿಮಗೆ ಆಗಿದೆ ಎನ್ನಲಾದ ಪೆಟ್ಟುಗಳಿಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಗಲಾಟೆ ನಡೆಯಿತು ಎನ್ನಲಾದ ದಿನ ನೀವು ಪೊಲೀಸರಿಗೆ ಮಾಹಿತಿಯನ್ನು ನೀಡಿದ್ದೀರಾ ಎಂದರೆ ಸಾಕ್ಷಿ ಫೋನ್ ಮಾಡಿ ಹೇಳಿದ್ದೆವು ನಂತರ ಪೊಲೀಸರು ಆಸ್ಪತ್ರೆಯಲ್ಲಿಯೇ ನನ್ನ ಹೇಳಿಕೆಯನ್ನು ತೆಗೆದುಕೊಂಡರು ಎನ್ನುತ್ತಾರೆ.

16. ಪೊಲೀಸರು ಮಹಜರಿಗೆ ಬಂದಿದ್ದ ದಿನಾಂಕ ನೆನಪಿಲ್ಲ. ಆದರೆ ಅವರು ಬಂದಾಗ ಸಮಯ ಸಂಜೆ 4 ರಿಂದ 4.30 ಗಂಟೆ ಆಗಿತ್ತು. ಚಾಸಾ.2 ನನ್ನ ಬಾವನಾಗಬೇಕು ಮತ್ತು ಚಾಸಾ.3 ನನ್ನ ಸ್ನೇಹಿತ. ಚಾಸಾ.2 ಮತ್ತು 3 ರವರನ್ನು ನೀವು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಮಹಜರಿಗೆ ಸಹಿ ಹಾಕಬೇಕು ಎಂದು ಹೇಳಿ ಸಹಿ ಹಾಕಿಸಿದ್ದೀರಿ ಎಂದರೆ ಸರಿ. ಆ ರೀತಿ ನೀವು ಚಾಸಾ.2

ಮತ್ತು 3 ರವರೊಂದಿಗೆ ಠಾಣೆಗೆ ಹೋಗಿರುವುದನ್ನು ಹೊರತುಪಡಿಸಿ ಬೇರೆ ದಿನ ನೀವು ಠಾಣೆಗೆ ಹೋಗಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಹೇಳಿದಂತೆ ಆರೋಪಿ ಎಂದಿಗೂ ನಿಮಗೆ ಬೈದಿಲ್ಲ, ನಿಮ್ಮ ಜಾತಿಯನ್ನು ನಿಂದಿಸಿಲ್ಲ ಮತ್ತು ನಿಮ್ಮ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಆ ರೀತಿ ಆರೋಪಿ ಯಾವುದೇ ಕೃತ್ಯವನ್ನು ಎಸಗದಿದ್ದರೂ ಸಹ ಆತನ ವಿರುದ್ಧ ಸುಳ್ಳು ದೂರನ್ನು ಕೊಟ್ಟು ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಮು.ಮಾ.1 ದೊಣ್ಣೆಗೂ ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ